

ಮೊದಲೇ ಸಿಕ್ಕರೆ, ರೆಕಾರ್ಡಿಂಗ್ ಹೋಗುವ ಹಿಂದಿನ ಕ್ಷಣದವರೆಗೂ ಅದನ್ನು ಮತ್ತೆ ಮತ್ತೆ ಕೇಳಿಸಿಕೊಳ್ಳುತ್ತ, ಓದಿಕೊಳ್ಳುತ್ತ ಇರುತ್ತೇನೆ' ಎಂದು ಹಾಡೊಂದಕ್ಕೆ ಧ್ವನಿಯಾಗುವ ಸಿದ್ಧತೆಯನ್ನು ಅವರು ವಿವರಿಸುತ್ತಾರೆ.

ಅದಿತಿಗೆ ತಂದೆ ಅರುಣ್ ಸಾಗರ್ ಬಗ್ಗೆ ತುಂಬ ಹೆಮ್ಮೆ ಇದೆ. ಅವರ ನೆರಳಿನ ಆಚೆಗೆ ತನ್ನದೇ ಒಂದು ಅಸ್ಮಿತೆಯನ್ನು ಕಟ್ಟಿಕೊಳ್ಳುವ ಛಲವೂ ಇದೆ.

'ತಂದೆಯ ಪ್ರಸಿದ್ಧಿ ನನಗೆ ಯಾವತ್ತೂ ಭಾರ ಅನಿಸಿಲ್ಲ. ಯಾರಾದರೂ ನೀನು ಅರುಣ್ ಸಾಗರ್ ಮಗಳಲ್ವಾ ಅಂತ ಹೇಳಿದರೆ ಅಪ್ಪನ ಬಗ್ಗೆ, ಅವರ ಪ್ರತಿಭೆಯ ಬಗ್ಗೆ ಹೆಮ್ಮೆಯಾಗುತ್ತದೆ. ಅದರಾಚೆಗೆ ನನ್ನದೇ ಒಂದು ಸ್ವಂತಿಕೆಯನ್ನು ರೂಢಿಸಿಕೊಂಡು ಅದರ ಮೂಲಕವೇ ಗುರ್ತಿಸಿಕೊಳ್ಳಲೂ ಬಯಸುತ್ತೇನೆ. ಈಗ ಅದೇ ದಾರಿಯಲ್ಲಿದ್ದೇನೆ' ಎನ್ನುವ ಈ ಹುಡುಗಿಗೆ ತನ್ನ ಸುತ್ತಲಿನ ಸಮಾಜವೇ ಸೃಜನಶೀಲತೆಗೆ ಸ್ಫೂರ್ತಿಯಂತೆ.

'ಸುತ್ತಲಿನ ಸಮಾಜದಲ್ಲಿ ನಡೆಯುವ ವಿದ್ಯಮಾನಗಳು ನನ್ನನ್ನು ತುಂಬ ಪ್ರಭಾವಿಸುತ್ತವೆ. ಬಸ್‌ನಲ್ಲಿ ಹೋಗುವಾಗ, ಬೀದಿಯಲ್ಲಿ ನಡೆಯುವಾಗ, ಮತ್ತೆಲ್ಲೋ ನಿಂತಾಗ ನೋಡುವ ಘಟನೆಗಳು, ನಡೆಯುವ ಸಂಗತಿಗಳಿಗೆ ಕಲೆಯ ಮೂಲಕ ರಿಯಾಕ್ಟ್ ಮಾಡಬೇಕು ಅನಿಸುತ್ತದೆ. ಇದೇ ಉದ್ದೇಶದಿಂದ ಕಾನ್ಸೆಪ್ಚುವಲ್ ಇಲ್ಲಸ್ಟ್ರೇಷನ್ ಮಾಡುತ್ತಿದ್ದೇನೆ' ಎಂದು ಆಸಕ್ತಿಯ ಇನ್ನೊಂದು ಕವಲನ್ನು ಪರಿಚಯಿಸಿಕೊಡುತ್ತಾರೆ ಅವರು.

ಸ್ವತಂತ್ರ ಪ್ರತಿಭೆಯಿಂದ ಗುರ್ತಿಸಿಕೊಳ್ಳಬೇಕು ಎಂಬ ಹಂಬಲವೇ ಅವರನ್ನು ಹಲವು ಸೃಜನಶೀಲ ಪ್ರಯೋಗಗಳಿಗೆ ಪ್ರೇರೇಪಿಸುತ್ತಿದೆ. ತನ್ನದೇ ಒಂದು ಮ್ಯೂಸಿಕ್ ಆಲ್ಬಂ ಮಾಡಬೇಕು ಎಂಬುದು ಅವರ ಬಹುದೊಡ್ಡ ಕನಸು. ಈ ಕನಸನ್ನು ನನಸಾಗಿಸಿಕೊಳ್ಳುವ ತಯಾರಿಯನ್ನೂ ಮಾಡುತ್ತಿದ್ದಾರೆ. ಇದರ ಭಾಗವಾಗಿಯೇ ಎರಡು ಹಾಡುಗಳ ಸಾಹಿತ್ಯವನ್ನೂ ಬರೆದಿಟ್ಟುಕೊಂಡಿದ್ದಾರೆ.

ಈ ಆಲ್ಬಂ ಕನ್ನಡದ್ದಾಗಿರುತ್ತದೆಯೇ? ಎಂಬ ಪ್ರಶ್ನೆಗೆ ಅವರು ಕೊಂಚ ವಿಸ್ತಾರವಾಗಿಯೇ ಉತ್ತರಿಸುತ್ತಾರೆ.

'ನನ್ನ ಪೀಳಿಗೆಯ ಬಹುತೇಕರು ಇಂಗ್ಲಿಷ್ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರು. ನಮಗೆ ಸ್ಕೂಲ್‌ಗಳಲ್ಲಿ ಯಾವಾಗಲೂ ಇಂಗ್ಲಿಷ್‌ನಲ್ಲಿ ಸಂವಹನ ನಡೆಸಿ, ಕನ್ನಡದಲ್ಲಿ ಮಾತಾಡಿದರೆ ದಂಡ ಹಾಕುತ್ತೇವೆ ಎಂದು ಬೈದು ಬೈದು ಇಂಗ್ಲಿಷ್ ಅನ್ನು ಹೇರಿದರು. ಹೀಗೆ ಹತ್ತಾರು ವರ್ಷ ಇಂಗ್ಲಿಷಿನಲ್ಲಿಯೇ ವ್ಯವಹರಿಸಿ ನಮ್ಮ ಯೋಚನಾಕ್ರಮವೇ ಇಂಗ್ಲಿಷಿನಲ್ಲಿ ನಡೆಯುವ ಹಾಗಾಗಿದೆ. ಈಗ ನನಗೆ ನನ್ನ ಭಾಷೆ ಕನ್ನಡದಲ್ಲಿ ಯೋಚನೆ ಮಾಡಬೇಕು ಎಂದರೂ ಸಾಧ್ಯವಾಗುವುದಿಲ್ಲ' ಎನ್ನುವ ಅವರ ಮಾತಿನಲ್ಲಿ ಮಾತೃಭಾಷೆಯಿಂದ ದೂರವಾದ ಪೀಳಿಗೆಯ ವಿಷಾದದ ಜೊತೆಗೆ ಹೊಸದೇ ಆದ ಒಂದು ಸಂವೇದನೆ ಹರಳುಗಟ್ಟುತ್ತಿರುವ ಸೂಚನೆಯನ್ನೂ ಕಾಣಬಹುದು.

'ಸಂಗೀತಕ್ಕೆ ಭಾಷೆಯ ಗಡಿಯಿಲ್ಲ' ಎನ್ನುವ ಅವರ ನಂಬಿಕೆಯೂ ಅವರಿಗೆ ಬಹುಭಾಷೆಯ ಸಂಗೀತ ಆಲ್ಬಂ ಹೊರತರುವ ಕನಸಿಗೆ ಇಂಬು ನೀಡಿದೆ.

ಹಾಡನ್ನು ಲೈಫ್‌ಸ್ಟೈಲ್ ಎಂದುಕೊಳ್ಳುವ ಈ ಹುಡುಗಿಗೆ ಹಾಡೇ ಲೈಫ್ ನೀಡುತ್ತಿರುವುದು ಅವರಿಗಷ್ಟೇ ಅಲ್ಲ, ಕನ್ನಡ ಚಿತ್ರರಂಗಕ್ಕೂ ಒಳ್ಳೆಯ ಸೂಚನೆಯೇ. ■

# 'ಇಕ್ಕಟ್'ನಲ್ಲಿ ಸಾಂಸಾರಿಕ ಬಿಕ್ಕಟ್ಟು



ಎಶಮ್ ಖಾನ್ ಮತ್ತು ಹಸೀನ್ ಖಾನ್

ಮದುವೆಯಾದ ಮೇಲೆ ಮನೆಯೇ ಜೈಲು ಅನ್ನುವುದು ಜೋಕಿನ ಮಾತಾಯ್ತು. ಆದರೆ ಕೊರೊನಾ ಕಾರಣಕ್ಕೆ ಲಾಕ್‌ಡೌನ್ ಘೋಷಣೆಯಾಯ್ತಲ್ಲ– ಆ 21 ದಿನಗಳಲ್ಲಿ ಈ ಜೋಕಿನ ಮಾತು ಹಲವರ ಬದುಕಿನಲ್ಲಿ ಅಕ್ಷರಶಃ ನಿಜವೂ ಆಗಿದೆ. ಅಷ್ಟೇ ಅಲ್ಲ, ಒಂದು ಸಿನಿಮಾಗೂ ಇದು ವಸ್ತುವಾಗಿದೆ.

'ಲೂಸ್ ಕನೆಕ್ಷನ್' ಎಂಬ ಜನಪ್ರಿಯ ವೆಬ್ ಸೀರೀಸ್ ಮಾಡಿದ್ದ ಎಶಮ್ ಖಾನ್ ಮತ್ತು ಹಸೀನ್ ಖಾನ್ ಸಹೋದರರು ಇಂಥದ್ದೊಂದು ಲಾಕ್‌ಡೌನ್ ಸಂಸಾರದ ಕಥೆಯನ್ನು ಹೆಣೆದಿದ್ದಾರೆ. ಅವರಿಗಿದು ಮೊದಲ ಸಿನಿಮಾ. ಎಂಥ ದೊಡ್ಡ ಮನೆಯಿದ್ದರೂ ಮನೆಯೊಳಗೇ ತಿಂಗಳಾನುಗಟ್ಟಲೆ ಇರಬೇಕು ಎಂದಾದರೆ ಇಕ್ಕಟ್ಟು ಅನಿಸಲು ಶುರುವಾಗುತ್ತದೆ. ಹಾಗಾಗಿಯೇ ಈ ಸಿನಿಮಾಗೆ 'ಇಕ್ಕಟ್' ಎಂದು ಹೆಸರಿಟ್ಟಿದ್ದಾರೆ.

ವಿಚ್ಛೇದನ ಪಡೆದುಕೊಂಡಿದ್ದ ಗಂಡ ಹೆಂಡತಿ ಇನ್ನೇನು ಬೇರೆ ಬೇರೆಯಾಗಬೇಕು, ಅಷ್ಟರಲ್ಲಿ ಲಾಕ್‌ಡೌನ್ ಘೋಷಣೆಯಾಗುತ್ತದೆ. ಅನಿವಾರ್ಯವಾಗಿ ಒಂದೇ ಮನೆಯಲ್ಲಿ ಇರಬೇಕಾದ ಪರಿಸ್ಥಿತಿ ಬರುತ್ತದೆ. ಮಾನಸಿಕವಾಗಿ ಬೇರೆಯಾಗಿದ್ದ ಗಂಡ ಹೆಂಡತಿ ಅನಿವಾರ್ಯವಾಗಿ ಒಟ್ಟಿಗೇ ಇರುವಂತಾದರೆ ಅಲ್ಲಿ ಸೃಷ್ಟಿಯಾಗುವ ಫಜೀತಿಗಳೇನು? 'ಇಕ್ಕಟ್ಟಿನಲ್ಲಿ ಸುಖವಿದೆ' ಎನ್ನುವ ಪೋಲಿ ಮಾತು ಇಲ್ಲಿ ನಿಜವಾಗುತ್ತದಾ ಎಂಬ ಸಂದೇಹಗಳಿಗೆಲ್ಲ ಸಿನಿಮಾ ನೋಡಬೇಕಷ್ಟೆ.

ಲಾಕ್‌ಡೌನ್ ವಸ್ತು ಇಟ್ಟುಕೊಂಡು ಅರೆ ಲಾಕ್‌ಡೌನ್ ಸಮಯದಲ್ಲಿ ಚಿತ್ರೀಕರಣಗೊಂಡಿರುವ ಈ ಸಿನಿಮಾದಲ್ಲಿ ಇನ್ನೂ ಹಲವು ವಿಶೇಷಗಳಿವೆ. ಕಿರುತೆರೆ ನಟಿಯಾಗಿದ್ದ, ಬಿಗ್ ಬಾಸ್ ರಿಯಾಲಿಟಿ ಶೋ ಮೂಲಕ ಜನಪ್ರಿಯತೆ ಹೆಚ್ಚಿಸಿಕೊಂಡಿರುವ ಭೂಮಿ ಶೆಟ್ಟಿ ಈ ಸಿನಿಮಾ ಮೂಲಕ ನಾಯಕಿಯಾಗಿ ಚಂದನವನಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಅವರ ಜೊತೆಗೆ ತೆರೆಯ ಮೇಲೆ ಕಿತ್ತಾಡುವ ಸಿಡುಕುಮೂತಿ ಗಂಡನಾಗಿ ನಾಗಭೂಷಣ್ ಎನ್.ಎಸ್. ನಟಿಸಿದ್ದಾರೆ. ಸುಂದರ್ ಅವರೂ ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದಾರೆ. ಲವಿತ್ ಛಾಯಾಗ್ರಹಣ ಚಿತ್ರಕ್ಕಿದೆ.

ಇದೊಂದು ಪಕ್ಕಾ ಕಾಮಿಡಿ ಎಂಟರ್‌ಟೈನರ್ ಸಿನಿಮಾ. ತೆರೆಯ ಮೇಲೆ ಗಂಡ ಹೆಂಡತಿ ಇಕ್ಕಟ್ಟಿನಲ್ಲಿ ಸಾಂಸಾರಿಕ ಬಿಕ್ಕಟ್ಟು ಸೃಷ್ಟಿಸಿಕೊಂಡು ಕಿತ್ತಾಡುತ್ತಿದ್ದರೆ, ನೋಡುವ ಪ್ರೇಕ್ಷಕ ಹೊಟ್ಟೆ ಹುಣ್ಣಾಗುವಂತೆ ನಗುತ್ತಾನೆ ಎಂದು ವಿಶ್ವಾಸದಿಂದ ಹೇಳಿಕೊಳ್ಳುತ್ತದೆ ಚಿತ್ರತಂಡ.

ಈಗಾಗಲೇ ಸಿನಿಮಾದ ಚಿತ್ರೀಕರಣ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ನಡೆಯುತ್ತಿವೆ. ■



ನಾಗಭೂಷಣ್ ಎನ್. ಎಸ್. ಮತ್ತು ಭೂಮಿ ಶೆಟ್ಟಿ